(ಗೊಂದಲ)

ಅಧ್ಯಕ್ಷರು: ಈ ಸದನ ಮುಗಿಯುವುದರೊಳಗಾಗಿ ಕೊಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ): ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಆಸ್ಪತ್ರೆಗೆ ಹೋಗಿದ್ದೆ, ಸ್ವಲ್ಪ ಲೇಟ್ ಆಯಿತು.

ಅಧ್ಯಕ್ಷರು: ಯಾರಿಗಾದರೂ ಹೇಳಿ ಹೋಗಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಭಾರಿ urgent ಇತ್ತು. ಇದ್ದಕ್ಕಿದ್ದಂತೆ ಆಸ್ಪತ್ರೆಗೆ ಹೋಗಬೇಕಾಗಿ ಬಂದಿತು.

ಅಧ್ಯಕ್ಷರು: ನಮಗೂ urgent ಇದೆಯಲ್ಲ ಇಲ್ಲಿ....

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, sudden ಆಗಿ ಹುಷಾರು ತಪ್ಪಿದರೆ ಏನು ಮಾಡುವುದು?

ಅಧ್ಯಕ್ಷರು: ಪುಟ್ಟಣ್ಣಯ್ಯನವರೇ, ಅಯಿತು, ಕೇಳಿ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಖಾಸಗಿ ಡೆವಲಪರ್ ನಿಷೇಧ

109 (1046) ಶ್ರೀ ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ) :- ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿದ್ದು, ನಗರದ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ತುಂಬಾ ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬೆಂಗಳೂರಿನ ಬಿಡಿಎ ಮತ್ತು ಖಾಸಗಿ ಡೆವಲಪರ್ಸ್ ಸಂಸ್ಥೆಗಳನ್ನು ರದ್ದು ಪಡಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ;

(ಇ) ಹಾಗಿದ್ದಲ್ಲಿ, ಅದನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು) :–

(ಅ) ಹೌದು. ಸರ್ಕಾರದ ಆದೇಶದಂತೆ 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಸ್ತಿತ್ವಕ್ಕೆ ಬಂದಿದ್ದು ಸದರಿ ಆದೇಶದನ್ವಯ ಬಿ.ಬಿ.ಎಂ.ಪಿ.ಯ ಒಟ್ಟು ವಿಸ್ತೀರ್ಣವು 800 ಚ.ಕಿ.ಮೀ ಗಳಾಗಿದ್ದು, ಇದು ಹಿಂದಿನ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣವಾಗಿದ್ದ 225 ಚ.ಕಿ.ಮೀ ಪ್ರದೇಶಕ್ಕಿಂತ ಹೆಚ್ಚಾಗಿದ್ದು, ಒಟ್ಟಾರೆ ಬಿಬಿಎಂಪಿಯ ಹೆಚ್ಚಳವಾದ ವಿಸ್ತೀರ್ಣವು 575 ಚ.ಕಿ.ಮೀ ಗಳಾಗಿರುತ್ತವೆ. ಇದರ ಜೊತೆಗೆ ಇದರ ಬಿಡಿಎ ಯ ವಿಸ್ತೀರ್ಣವು 419.50 ಚ.ಕಿ.ಮೀ ಗಳಾಗಿದ್ದು, ಈ ವಿಸ್ತೀರ್ಣವು ಬಿಬಿಎಂಪಿ ವ್ಯಾಪ್ತಿಯ ಹೊರಗಡೆ ಬರುವ ಪ್ರದೇಶವಾಗಿರುತ್ತದೆ. ಬಿಬಿಎಂಪಿಗೆ ಸೇರ್ಪಡೆಯಾದ ಹೊಸ ವಿಸ್ತೀರ್ಣವಾದ 575 ಚ.ಕಿ.ಮೀ ಪ್ರದೇಶವು ಹಿಂದೆ ನಗರ ಸಭೆಗಳ ವ್ಯಾಪ್ತಿ ಮತ್ತು ಟೌನ್ ಮುನಿಸಿಪಲ್ ಕೌನ್ಸಿಲ್ ವ್ಯಾಪ್ತಿಯಲ್ಲಿದ್ದು, ಈ ಪ್ರದೇಶಗಳಲ್ಲಿ ನಗರ ಯೋಜಿತ ಬೆಳವಣಿಗೆ ಇಲ್ಲದ್ದರಿಂದಾಗಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಕಂಡುಬಂದಿರುತ್ತದೆ. ಇದನ್ನು ಮನಗಂಡು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ 5 ವರ್ಷಗಳಲ್ಲಿ (2008–09 ರಿಂದ 2012–13 ರವರೆಗೆ) ಒಟ್ಟಾರೆ ಬಿಬಿಎಂಪಿ ವ್ಯಾಪ್ತಿಯಲ್ಲಿನ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಅಭಿವೃದ್ಧಿ ಕಾಮಗಾರಿಗಳು, ಚರಂಡಿ ಮತ್ತು ಮೋರಿಗಳ ನಿರ್ಮಾಣ, ಶಾಲಾಕಟ್ಟಡಗಳ ನಿರ್ಮಾಣ, ಮೇಲುಸೇತುವೆಗಳ ನಿರ್ಮಾಣ ಹಾಗೂ ಕೆರೆಗಳ ಪುನಶ್ಚೇತನ ಮತ್ತು ಅರಣ್ಯೀಕರಣ ಕಾಮಗಾರಿಗಳನ್ನು ರೂ. 1680 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ ಬೆಂಗಳೂರು ನಗರ ಹಾಗೂ ಕರ್ನಾಟಕದ ಮಹಾಜನಗಳಿಗಾಗಿ ಅರ್ಕಾವತಿ ಹಾಗೂ ಕೆಂಪೇಗೌಡ ಬಡಾವಣೆಗಳನ್ನು ನಿರ್ಮಿಸುತ್ತಿದ್ದು, ಕೆಂಪೇಗೌಡ ಬಡಾವಣೆಯಲ್ಲಿ ವಿವಿಧ ಅಳತೆಯ ಸುಮಾರು 76740 ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ಹಾಗೆಯೇ ಬೆಂಗಳೂರು ನಗರ ಹಾಗೂ ಸುತ್ತಮುತ್ತ ವಸತಿ ಸೌಲಭ್ಯ ಕೋರುವ ನಾಗರೀಕರಿಗಾಗಿ ಬಹುವಸತಿ ಕಟ್ಟಡಗಳನ್ನು ನಿರ್ಮಿಸಿ 2014ರ ಮಾರ್ಚ್ ಅಂತ್ಯದೊಳಗಾಗಿ 6500 ವಸತಿ ಗೃಹಗಳನ್ನು ಜನಸಾಮಾನ್ಯರಿಗೆ ಹಂಚಿಕೆ

ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಮೇಲ್ಕಂಡ ಎಲ್ಲಾ ಕಾರ್ಯಗಳನ್ನೊಳಗೊಂಡಂತೆ ಬೆಂಗಳೂರು ಮಹಾನಗರದ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೈಗೆತ್ತಿಕೊಳ್ಳಲಾಗುತ್ತಿದೆ. ಬೆಂಗಳೂರು ಮಹಾನಗರವು ಪ್ರಪಂಚದಲ್ಲಿಯೇ ಅತೀ ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು, ಇಡೀ ಪ್ರಪಂಚವನ್ನೇ ತನ್ನತ್ತ ಆಕರ್ಷಿಸುತ್ತಿರುವುದರಿಂದ ಹಾಗೂ ಮುಖ್ಯವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದಲ್ಲಿಯೇ ಮುಂಚೂಣಿಯಲ್ಲಿರುವುದರಿಂದ ನಗರದಲ್ಲಿನ ಜನಸಾಂದ್ರತೆ ಹಾಗೂ ವಾಹನ ಸಾಂದ್ರತೆ ಹೆಚ್ಚಾಗಿದ್ದು, ಮೂಲಭೂತ ಸೌಕರ್ಯಗಳ ಅಗತ್ಯತೆ ಹೆಚ್ಚು ಹೆಚ್ಚಾಗಿ ಬೇಕಾಗಿರುತ್ತದೆ. ಇದನ್ನು ಹಂತ ಹಂತವಾಗಿ ನಿವಾರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬಿಬಿಎಂಪಿಯಿಂದ ಅಗತ್ಯ ಕ್ರಮಗಳನ್ನು ಕೈಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

(ಆ) ಇಲ್ಲ

(ಇ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಬೆಂಗಳೂರು ಬೆಳೆಯುತ್ತಿರುವಂಥ ವಿಷಯದಲ್ಲಿ ಸರ್ಕಾರ ನಿಯಂತ್ರಣ ಮಾಡದೆ, ಸಿಕ್ಕಾಪಟ್ಟೆ ವಲಸೆ ಬರುತ್ತಿದ್ದಾರೆ. ಅದನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ, ಈಗಾಗಲೇ ನಗರೀಕರಣ 37% ಆಗಿದೆ. ಹಳ್ಳಿಗಳು ಸ್ಮಶಾನ ಆಗುತ್ತವೆ, ನಗರೀಕರಣಕ್ಕೆ ತಡೆ ಮಾಡದೇ ಇದ್ದರೆ, ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ, ಕ್ರೈಂ ಜಾಸ್ತಿ ಆಗುತ್ತದೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕು. ಇದರ ಉದ್ದೇಶವೇನೆಂದರೆ, ಬೆಂಗಳೂರಿನಲ್ಲಿರುವಂಥ ಜನರನ್ನು ರಕ್ಷಣೆ ಮಾಡದೆ ಇರುವಂಥ ಒಂದು ಕಾಲ ಬರಬಹುದು. ಈಗ ಕನ್ನಂಬಾಡಿ ಕಟ್ಟೆಯಲ್ಲಿರುವಂಥ ನೀರು ಬರುವುದು ಇನ್ನೊಂದು ವಾರ ತಡವಾಗಿದ್ದರೆ ಅರ್ಧ ಬೆಂಗಳೂರಿನಲ್ಲಿ ಹಾಹಾಕಾರ ಆಗುವಂಥ ಪರಿಸ್ಥಿತಿ ಇತ್ತು. ಈಗಾಗಲೇ 20 ಟಿ.ಎಂ.ಸಿ ನೀರು ಬೆಂಗಳೂರಿಗೆ ಬೇಕಾಗಿದೆ. ಇನ್ನೊಂದು 3–4 ವರ್ಷಗಳಾದರೆ 25 ರಿಂದ 30 ಟಿ.ಎಂ.ಸಿ. ನೀರು

ಕೊಡುವಂಥ ಕೆಲಸ ಆಗಬೇಕಾಗಿದೆ. ಒಂದು ಕಡೆ ಕೃಷಿ ಕ್ಷೇತ್ರಕ್ಕೆ ಬೇಕಾದಂಥ ನೀರು ಕೊಡದೇ ಇರುವಂಥ ಪರಿಸ್ಥಿತಿ ಬರುತ್ತದೆ. ಬೆಂಗಳೂರನ್ನು ಬೇರೆ ಬೇರೆ ಕಡೆಗೆ ವರ್ಗಾವಣೆ ಮಾಡಿ, ಎಲ್ಲಾ ಬೆಂಗಳೂರಿನಲ್ಲೇ ಇರಬೇಕೆಂದು ಏನಿದೆ?

ಅಧ್ಯಕ್ಷರು: ಪುಟ್ಟಣ್ಣಯ್ಯನವರೇ, ನೀವು ನಿರ್ದಿಷ್ಟವಾದ ಪ್ರಶ್ನೆಯನ್ನು ಕೇಳಿ. ವಾಸ್ತವಿಕವಾದ ಪ್ರಶ್ನೆ ಇದೆಯಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಕೇಳಿದ್ದೇವೆ ಸ್ವಾಮಿ, ಅವರು ಕೊಟ್ಟಿರುವಂಥ ಉತ್ತರ ನೀವು ಕೇಳಿರುವ ಪ್ರಶ್ನೆಯಲ್ಲಿ ಬೆಂಗಳೂರು ಬೆಳೆಯುತ್ತಿರುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ, ಈ ಪ್ರಶ್ನೆ ಉದ್ಭವ ಆಗುವುದಿಲ್ಲ. ಖಾಸಗಿ ಡೆವಲಪರ್ಸ್ ರೈತರಿಂದ ಭೂಮಿಯನ್ನು ವಶಪಡಿಸಿಕೊಂಡು ಯಾವಾಗಲೂ ಭೂಮಿಯನ್ನು ಡೆವಲಪರಸ್ಸ ಮಾಡುತ್ತಾರೆ. ಬಿಡಿಎ ಭೂಮಿಯನನು ನಾಶ ಮಾಡುತ್ತಿದೆ. ದಯವಿಟ್ಟು ಮಾನ್ಯ ಅಧ್ಯಕ್ಷರೆ, ನನಗಿಂತ ಹೆಚ್ಚು ಅನುಭವ ತಮಗಿದೆ. ಬೃಹತ್ ಬೆಂಗಳೂರು ಬೆಳೆಯುತ್ತಿರುವುದನ್ನು ನಿಲ್ಲಿಸುವಂಥ ಕೆಲಸವನ್ನು ಮಾನ್ಯ ಸಿದ್ದರಾಮಯ್ಯನವರಂಥ ಮುಖ್ಯಮಂತ್ರಿಗಳು ಮಾಡಬೇಕೆಂಬುದೇ ನಮ್ಮ ಆಸೆ.

ಅಧ್ಯಕ್ಷರು: ಬೆಳೆಯದಂತೆ ನಿಲ್ಲಿಸಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಬಿ.ಡಿ.ಎ.ಯನ್ನು ರದ್ದು ಮಾಡಬೇಕು. ಏಕೆ ಸ್ವಾಮಿ, ಬೆಂಗಳೂರೇ ಏಕೆ ಬೆಳೆಯಬೇಕು?

ಶ್ರೀ ಸಿ.ಟಿ. ರವಿ: ಕಸ ಹಾಕುವುದಕ್ಕೆ ಜಾಗವಿಲ್ಲ, ಕುಡಿಯುವುದಕ್ಕೆ ನೀರಿಲ್ಲ. ಬೆಳೆಸಿ ಬೆಳೆಸಿ ಎಂದರೆ ಎಲ್ಲಿ ಬೆಳೆಸುವುದು?

(ಗೊಂದಲ)

ಅಧ್ಯಕ್ಷರು: ಪುಟ್ಟಣ್ಣಯ್ಯ ಕೇಳಿರುವ ಪ್ರಶ್ನೆಯಲ್ಲಿ ಅರ್ಥವಿದೆ, ಇಲ್ಲ ಎಂದು ಹೇಳುವುದಿಲ್ಲ. ತಾವುಗಳು ಬೆಂಗಳೂರು ಬಗ್ಗೆ ಕಾಳಜಿ ಇರುವಂಥವರು, ಒಂದು ವಿಶೇಷವಾದ ರೀತಿಯಲ್ಲಿ ನಗರಾಭಿವೃದ್ಧಿ ಪ್ರಶ್ನೆ ಬಂದಾಗ ಅದರಲ್ಲಿ ವಿಶೇಷವಾಗಿ

ಚರ್ಚೆ ಮಾಡಿ ಅವಕಾಶವಿದೆ, 1 ಗಂಟೆ ಅಲ್ಲದಿದ್ದರೆ 2 ಗಂಟೆ ಚರ್ಚೆ ಮಾಡಿ, you throw light on the subject.

ಶ್ರೀ ಸಿದ್ದರಾಮಯ್ಯ: ಬಜೆಟ್ ಮೇಲೆ ಮಾತನಾಡಿ.

ಅಧ್ಯಕ್ಷರು: ಮಾತನಾಡಿ, ನಿಮಗೆ ಅವಕಾಶ ಕೊಡೋಣ. ಈಗ ನಮ್ಮ ದುರಂತ ಏನಾಗಿದೆಯೆಂದರೆ, individually ಬಜೆಟ್ ಬೇಡಿಕೆ ಮೇಲೆ ಒಬ್ಬರೂ ಮಾತನಾಡುತ್ತಿಲ್ಲ. ಒಟ್ಟಿಗೆ ಕ್ಲಬ್ ಮಾಡಿದ್ದೇವೆ. ಪುಟ್ಟಣ್ಣಯ್ಯ ಕೇಳಿದ ಪ್ರಶ್ನೆ ಮೂಲಭೂತವಾದ ಪ್ರಶ್ನೆಯಾಗಿದೆ. ಅದಕ್ಕೆ ಅವಶ್ಯಕವಾಗಿ ಸರ್ಕಾರಗಳು ಸ್ಪಂದಿಸಬೇಕು. ವಿಶೇಷವಾಗಿ ಚರ್ಚೆ ಮಾಡಿ. ಒಂದು ಅವಕಾಶ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಪುಟಣ್ಣಯ್ಯ ನವರು ಕೇಳುವುದು ಸರಿ ಇದೆ. ಬೆಂಗಳೂರು ಒಂದು fastest growing city. ಇಲ್ಲಿ ಒಂದು ಕೋಟಿ ಜನಸಂಖ್ಯೆ ಆಗಿದೆ. 10 ಲಕ್ಷ floating population ಇದೆ. ಅಲ್ಲಿ ಮೂಲಭೂತ ಸೌಕರ್ಯಗಳು ಕಡಿಮೆ ಇದೆ. ಕಸ ವಿಲೇವಾರಿ ಆಗುತ್ತಿಲ್ಲ. ಇವೆಲ್ಲಾ ತೊಂದರೆಗಳಿವೆ ಎಂದು ಪುಟ್ಟಣ್ಣಯ್ಯ ಕೇಳುವುದೇನೋ ಸರಿ. ರವಿಯವರೂ ಕೇಳುವುದಕ್ಕೆ ಪ್ರಾರಂಭಿಸಿದ್ದಾರೆ. ಅವರು ಐದು ವರ್ಷ ಇದ್ದಾಗ ಇದನ್ನೆಲ್ಲಾ ಕಡಿಮೆ ಮಾಡಿದ್ದರೆ ಈ ಪ್ರಶ್ನೆ ನಮಗೆ burden ಆಗುತ್ತಿರಲಿಲ್ಲ. ನೀವು ಮಾಡದೆ ಬಿಟ್ಟಿದ್ದರಿಂದ ನಮಗೆ burden ಜಾಸ್ತಿ ಆಗಿದೆ.

ಶ್ರೀ ಸಿ.ಟಿ. ರವಿ: ಇಲ್ಲಿ ಇದ್ದಾಗ ನೀವು ಕೇಳುತ್ತಿದ್ದಿರಲ್ಲ? ಈಗ ಮರೆತಿದ್ದೀರೆಂದು ಕೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ನೀವು ಮಾಡಲಿಲ್ಲವೆಂಬ ಪ್ರಶ್ನೆ ಈಗ ಜನರು ಕೇಳುತ್ತಿರುವುದು.

ಅಧ್ಯಕ್ಷರು: ಅವರು ಮಾಡಲಿಲ್ಲ.ನೀವು ಮಾಡಿ.

ಅಧ್ಯಕ್ಷರು: ಅವರು ಮಾಡಲಿಲ್ಲ. ನೀವು ಮಾಡಿ.

ಶ್ರೀ ಸಿದ್ದರಾಮಯ್ಯ: ನಾವು ಮಾಡೋಣ. ಇದು ಜನಸಂಖ್ಯೆ ಜಾಸ್ತಿ ಆಗಿದೆ. ವಾಹನಗಳ ಸಂಖ್ಯೆ ಜಾಸ್ತಿ ಆಗಿದೆ. ಪರಿಸರ ಹಾಳಾಗುತ್ತಿದೆ. ರಸ್ತೆಗಳು ಕಿರಿದಾಗಿವೆ. Foot-pathಗಳು ಸರಿ ಇಲ್ಲ. Flyover ಇಲ್ಲ. underpass ಇಲ್ಲ. ಆದುದರಿಂದ ಹಳ್ಳಿಯಿಂದ ಜನರು ಪಟ್ಟಣಕ್ಕೆ ವಲಸೆ ಬರುವವರ ಸಂಖ್ಯೆ ಜಾಸ್ತಿಯಾಗಿದೆ. ಬೇರೆ ಬೇರೆ ರಾಜ್ಯಗಳಿಂದ, ಬೇರೆ ಬೇರೆ ಜಿಲ್ಲೆಗಳಿಂದ ಉದ್ಯೋಗ ಹುಡುಕಿಕೊಂಡು ಬರುತ್ತಿದ್ದಾರೆ. ಹೀಗಾಗಿ ಬೆಂಗಳೂರು ನಗರ ಇವತ್ತು fastest growing city ಆಗಿಬಿಟ್ಟಿದೆ. ಬೆಂಗಳೂರಿನ ಕಡೆ ಇಡೀ ದೇಶ, ಇಡೀ ಜಗತ್ತೆ ನೋಡುತ್ತಿದೆ. ಬೆಂಗಳೂರು ನಗರಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಇರುವ ಜನಸಂದಣಿಯನ್ನು ಕಡಿಮೆ ಮಾಡಬೇಕಾದ್ದು ಅತ್ಯಂತ ಅಗತ್ಯ ಎಂದು ನನಗನಿಸುತ್ತಿದೆ. ಆದುದರಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಬಜೆಟ್‌ನಲ್ಲಿ ಅನೇಕ ಕಾರ್ಯಕ್ರಮಗಳನ್ನು ಈ ಬಾರಿ ಘೋಷಣೆ ಮಾಡಿದ್ದೇನೆ.

ಅಧ್ಯಕ್ಷರು: ಒಂದು ಕೆಲಸ ಮಾಡೋಣ. Total perspective plan ಅನ್ನು ಮೊದಲು ಮಾಡಿಸಿ. ಅದರಲ್ಲಿ experts, ಜನ ಪ್ರತಿನಿಧಿಗಳ ಜೊತೆ ಚರ್ಚೆ ಮಾಡಿ ಇಟ್ಟುಕೊಂಡರೆ ಅದರ ಪ್ರಕಾರ you can proceed. Better to work-out.....

ಶ್ರೀ ಸಿದ್ದರಾಮಯ್ಯ: ಅದನ್ನು ಮಾಡಿಸೋಣ.

ಅಧ್ಯಕ್ಷರು: ಇದು ಏನಾಗುತ್ತದೆ ಎಂದರೆ, ಕೆಲವು ಕಡೆ elevated rail ಹಾಕಿದರು. ಅಲ್ಲಿ straight line ಇಲ್ಲ. ಹೀಗೆ ಹೀಗೆ ಹೋಗುತ್ತವೆ. ಅದಕ್ಕೆ better to work out a...

ಶ್ರೀ ಸಿದ್ದರಾಮಯ್ಯ: ಅದು ನಿಜ. ಅದನ್ನೂ ಕೂಡ ಗಂಭೀರವಾಗಿ ಯೋಚನೆ ಮಾಡುವ ವಿಚಾರ. ಅದನ್ನು ಮಾಡಿಸೋಣ. ಜೊತೆಗೆ ಈಗಾಗಲೇ ಬೆಂಗಳೂರು ನಗರದಲ್ಲಿ ಸ್ವಲ್ಪ ease out ಮಾಡುವ ಸಲುವಾಗಿ ರಸ್ತೆಗಳನ್ನು ಅಗಲೀಕರಣ ಮಾಡಲು ಬಹಳಷ್ಟು ಕಾರ್ಯಕ್ರಮಗಳನ್ನು announce ಮಾಡಿದ್ದೇನೆ. ಅದನ್ನು

ಈಗ ಹೇಳುವುದಕ್ಕೆ ಹೋಗುವುದಿಲ್ಲ. ಬಜೆಟ್‌ನಲ್ಲಿ ಹೇಳಿದ್ದೇನೆ. ಚರ್ಚೆ ಮಾಡುವಾಗ ಹೇಳಬಹುದು. ಇದರ ಜೊತೆಗೆ ಈಗಾಗಲೇ ಚರ್ಚೆಯಾದಂತೆ 4,3000 ಕೋಟಿ ವೆಚ್ಚದಲ್ಲಿ peripheral road ಕೂಡ ಮಾಡುತ್ತಿದ್ದೇವೆ. water supply ಹಾಗೂ sewerage ಸಲುವಾಗಿ ಅನೇಕ ಕೆಲಸಗಳನ್ನು ಮಾಡುತ್ತಿದ್ದು, ಮುಂದಿನ ಐದು ವರ್ಷಗಳೊಳಗೆ ಬೆಂಗಳೂರಿನಲ್ಲಿ ಜನಸಂದಣಿ ಮತ್ತು ವಾಹನ ಸಂಚಾರಕ್ಕೆ ಬಹಳ ತೊಂದರೆ ಇದೆ, ಇದನ್ನು ease out ಮಾಡಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಬಹುಶಃ ಬಜೆಟ್ speech ಓದಿದರೆ ಇದೆಲ್ಲವೂ ಪುಟ್ಟಣ್ಣಯ್ಯನವರಿಗೆ ಗೊತ್ತಾಗುತ್ತದೆ. ಅವರ ಇನ್ನೊಂದು ಪ್ರಶ್ನೆ ಎಂದರೆ ಬಿ.ಡಿ.ಎ ರದ್ದು ಮಾಡುತ್ತೀರೋ, ಇಲ್ಲವೋ ಎಂದು. ಬಿ.ಡಿ.ಎ. ರದ್ದು ಮಾಡುತ್ತೀರಾ, ಬೇರೆ ಈ Developers ಎಲ್ಲಾ ಇದ್ದಾರಲ್ಲ. Housing Society ಅದು–ಇದು ಮಾಡಿಕೊಂಡಿರುವ Developers ಇವೆಲ್ಲಾ ಮಾಡುವುದನ್ನು ರದ್ದು ಮಾಡುತ್ತೀರಾ ಎಂದು ಕೇಳಿದ್ದಾರೆ. ಆ ತರಹದ ಯಾವುದೇ ಪ್ರಸ್ತಾಪ ಇಲ್ಲ. ಇದನ್ನು ಒಮ್ಮೆ ಕೂಲಂಕಷವಾಗಿ ಚರ್ಚೆ ಮಾಡಿ ನೀವು ಹೇಳುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳೋಣ.

ಅಧ್ಯಕ್ಷರು: ಅದನ್ನು ಮಾಡುವುದರ ಜೊತೆಗೆ ಈ satellite town ಗಳು ಒಂದು ನಾಲ್ಕೈದು ಇವೆಯಲ್ಲಾ....

ಶ್ರೀ ಸಿದ್ದರಾಮಯ್ಯ: satellite town ಪಕ್ಕದಲ್ಲಿ ಇರುವಂತಹವು ರಾಮನಗರ, ತುಮಕೂರು, ಹೊಸಕೋಟೆ, ಚಿಕಕಬಳ್ಳಾಪುರ ಇವುಗಳ ಬಗ್ಗೆ ಯೋಚನೆ ಮಾಡಿ ಒಂದು ಸರಿಯಾದ ರೀತಿಯಲ್ಲಿ ಪ್ರಕ್ರಿಯೆ ಮಾಡಲು plan ಮಾಡಲು ಪ್ರಯತ್ನ ಮಾಡೋಣ.

ಅಧ್ಯಕ್ಷರು: ಓ.ಕೆ. ಈಗ ಬಿಟ್ಟು ಹೋದಂತಹ ಪ್ರಶ್ನೆಗಳು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅಧ್ಯಕ್ಷರೆ, ಕೆಲವು ಸಲಹೆಗಳಿವೆ.

ಶ್ರೀ ಸಿದ್ದರಾಮಯ್ಯ: ಸಲಹೆ ಕೊಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಕೊಯಮತ್ತೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಮಳೆ ನೀರನ್ನು ಅಷ್ಟರಮಟ್ಟಿಗೆ ಸಂಗ್ರಹಣೆ ಮಾಡಿದ್ದಾರೆ. ಬೆಂಗಳೂರಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೆ 30 ಸಾವಿರ ಲೀ. ನೀರು ಬೇಕು. ಹಾಗೇನಾದರೂ rate ಹಾಕಿದರೆ Bisleri 6 ಲಕ್ಷ ರೂ. ಆಗುತ್ತದೆ. 30 ಸಾವಿರ ಲೀಟರ್ ನೀರು ಪ್ರತಿಯೊಬ್ಬ ವ್ಯಕ್ತಿಗೂ ಬಳಕೆ ಮಾಡುವವರು ಕೂಡಿ ಹಾಕುವ ಕಾರ್ಯಕ್ರಮ ನಾವು ಏನು ಮಾಡಿದ್ದೇವೆ? ಕೊಯಮತ್ತೂರಿನಲ್ಲಿ ನೀರಿನ ಸಮಸ್ಯೆ ಇಲ್ಲ. ಅಷ್ಟೊಂದು ಮಳೆ ನೀರನ್ನು ಕೂಡಿ ಹಾಕುವುದು ವೈಜ್ಞಾನಿಕವಾಗಿ ಅಲ್ಲಿ ಸರಿ ಹೋಗಿದೆ.

ಅಧ್ಯಕ್ಷರು: ಮಳೆ ನೀರಿನ ಸಂಗ್ರಹಣೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಬೆಂಗಳೂರಿನಲ್ಲಿ ಏಕೆ ಸಮಸ್ಯೆ? ಬೆಂಗಳೂರಿನಲ್ಲಿ ನೀರು ಕೂಡಿ ಹಾಕುವ ಕಾರ್ಯಕ್ರಮ ಏಕೆ ಮಾಡಿಲ್ಲ? ಅಂತರ್ಜಲದ ಬಗ್ಗೆ ಆಲೋಚನೆ ಮಾಡಿದಾಗ ಅದು ಬಹಳ ಸಮಸ್ಯೆ ಇದೆ. ಅದರ ಬಗ್ಗೆ ಗಂಭೀರವಾಗಿ ಚಿಂತನೆಯಾಗಬೇಕು.

ಅಧ್ಯಕ್ಷರು: ಹೇಳಿದ್ದಾರೆ. ಸಾಕು.

ಶ್ರೀ ಸಿದ್ದರಾಮಯ್ಯ: ಬೆಂಗಳೂರಿನಲ್ಲಿಯೂ ಮಳೆ ನೀರಿನ ಸಂಗ್ರಹಣೆ ಇದೆ. ಆದರೆ, ಕಡ್ಡಾಯವಾಗಿ ಆಗುತ್ತಿಲ್ಲ. ಕಡ್ಡಾಯವಾಗಿ ಮಾಡಲು ಪ್ರಯತ್ನ ಮಾಡೋಣ.

ಅಧ್ಯಕ್ಷರು: ಈಗ ಮಲ್ಲಿಕಾರ್ಜುನ ಸಿದ್ದರಾಮಪ್ಪನವರು. ತಡೆಹಿಡಿಯಲಾದ ಪ್ರಶ್ನೆಗಳಿಗೆ ಉತ್ತರ.

ಗಣಿಗಾರಿಕೆ ಬಗ್ಗೆ ಲೋಕಾಯುಕ್ತ ವರದಿ

38 (353) ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹಿಂದಿನ ಲೋಕಾಯುಕ್ತರು ರಾಜ್ಯದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಗಣಿಗಾರಿಕೆಯ ವಿರುದ್ಧ ಸರ್ಕಾರಕ್ಕೆ ಎಂದು ವರದಿಯನ್ನು ಸಲ್ಲಿಸಿದ್ದಾರೆ ಹಾಗೂ ಈ